ತೋಟಕಟ್ಟಿರೊ ನನ್ನತಾವ ಮಾತಾಡಕೆ ಬಂದ್ಬಿಟ್ಟಾ ಮುಚ್ಕೊಂಡು ಹೋಗಲೇ...' ಎಂದು ಅವನಿಗೂ ಅವಮಾನ ಮಾಡಿ ಬಾಯಿಗೆ ಬಂದಂಗೆ ಬೈದು ಕಳಿಸಿದ್ದ. ಇದೇ ಅವಮಾನವ ಸಹಿಸಿಕೊಂಡು ರಾತ್ರಿಪೂರ ಯೋಚನೇಲಿ ಬಿದ್ದ ಹನುಮಪ್ಪ ಮನಸ್ಸಿನಲ್ಲಿ ಏನೋ ನಿರ್ಧಾರ ಮಾಡಿದವನಂತೆ ಚಂದ್ರಾಪುರದ ನಿಂಗೇಗೌಡರ ನೋಡೋಕೆ ಇಂದು ಬೆಳ್ಳಂಬೆಳಿಗ್ಗೆ ಬಸ್ಸತ್ತಿದ್ದ.

ಬಸ್ಸು ಚಂದ್ರಾಪುರದ ಬಸ್‌ಸ್ಟಾಂಡಿನಲ್ಲಿ ಬಂದು ನಿಂತಾಗಲೂ ಎಚ್ಚರವಾಗದೆ ಸೀಟಿನಲ್ಲೆ ಕೂತು ನಿದ್ದೆ ಹೋಗಿದ್ದ ಹನುಮಪ್ಪನನ್ನು ಕಂಡಕ್ಟರು ಎಚ್ಚರಿಸಿದಾಗ ಕಣ್ ಬಿಟ್ಟು ಚಂದ್ರಾಪುರ ಬಂತೇನಣ್ಣ ಎಂದು ಕೇಳುತ್ತಲೇ ಬಸ್ಸ್ ಇಳಿದು ಸೀದ ರಸ್ತೆಗುಂಟ ನಡಿಯುತ್ತಾ ಒಂದು ಹಳ್ಳಿಕಟ್ಟೆಯ ಅರಳಿ ಮರದ ಕೆಳಗಿನ ಟೀ ಅಂಗಡಿ ಹತ್ರ ಕೂತ್ಕಂಡು ಟೀ ಮಾಡುತ್ತಿದ್ದ ಆ ಹೆಂಗಸಿಗೆ, 'ಅಕ್ಕ ಒಂದು ಕಾಫಿ ಕೊಡಕ' ಅಂತ ಹೇಳಿ ಪಕ್ಕದಲ್ಲೆ ಟೀ ಕುಡಿಯುತ್ತಿದ್ದ ವ್ಯಕ್ತಿಗೆ ಅಣ್ಣಾ, 'ಇಲ್ಲಿ ನಿಂಗೇಗೌಡ್ರು ಅಂತ ಇದಾರಲ್ಲ ಉದ್ದುಕ್ಕೆ ಬಿಳಿ ಪೈಜಾಮಿನ ಅಂಗಿ ಹಾಕ್ಕೊಂಡು, ಬಿಳಿ ಟೋಪಿ ಹಾಕ್ಕೊಂಡು ಓಡಾಡ್ತರಲ್ಲ ಅವರ ಮನೆ ಎಲ್ಲಿದೆ' ಎಂದಾಗ ಆ ವ್ಯಕ್ತಿ 'ಓ..ಗಾಂಧಿವಾದಿ ನಿಂಗೇಗೌಡ್ರ ಇಲ್ನೋಡಿ ಈ ರೋಡ್ ಇದೆಯಲ್ಲ ಹಿಂಗೆ ಹೋದ್ರೆ ಅಲ್ಲಿ ಒಂದು ಗ್ರಂಥಾಲಯ ಇದೆ. ಅದರ ಪಕ್ಕದಲ್ಲಿ ಒಂದು ಅರಳಿಮರ. ಅದರ ಕೆಳಗೆ ಒಂದು ಸಣ್ಣಮನೆ ಇದೆ ಅದೇ ಅವರ ಮನೆ' ಎಂದ್ರು. ಹನುಮಪ್ಪ 'ಸರಿ ಕಣಣ್ಣ' ಅಂದು ಟೀನ ಇಸ್ಕಂಡು ಕುಡಿತಲೇ ಜೇಬಿನಿಂದ ಐದು ರೂಪಾಯಿ ತಗೆದು, 'ಅಕ್ಕ ಟೀ ದುಡ್ಡು ಎಷ್ಟಕ್ಕ' ಅಂದು ಐದು ರೂಪಾಯಿ ಕೊಟ್ಟ , ಆಕೆ ಆ ಹಣನ ತಕ್ಕೊಂಡು ಸರಿಹೋಯ್ತು ಕಣಣ್ಣ ಅಂದಳು. ಈತ ಅದೇ ರೋಡಲ್ಲಿ ಮುಂದುಕ್ಕೆ ನಡಿತ ನಡಿತ ಹೊರಟ. ಮುಂದೆ ಆ ವ್ಯಕ್ತಿ ಹೇಳಿದಂತೆ ಗ್ರಂಥಾಲಯ, ಅರಳಿಮರ, ಅದರ ಕೆಳಗೆ ಒಂದು ಸಣ್ಣ ಮನೆ ಎಲ್ಲವು ಕಂಡವು. ಆದರೆ ಜನ ಮಾತ್ರ ಜಾಸ್ತಿ ಇದ್ದರು. ಈ ಹನುಮಣ್ಣನಿಗೆ ಈ ನಿಂಗೇಗೌಡ್ರು ಪರಿಚಯ ಎಂದೂ ಕೂಡ ಈ ಜಾಗದಲ್ಲಿ ಆಗಿರಲಿಲ್ಲ. ಅದೆಲ್ಲ ಸ್ಕೂಲ್‌ನಲ್ಲಿ ಇದ್ದಾಗ ನೋಡಿದ್ದು ಒಂದೆರಡು ಬಾರಿ ಹಟ್ಟೀಲೆ ಯಾರದ್ದೋ ಜಗಳಕ್ಕೆ ಬುದ್ಧಿವಾದ ಹೇಳಲು ಬಂದವರು ಹೀಗೆ ಸಾರ್ವಜನಿಕವಾಗಿ ಆಗಾಗ ನೊಂದವರಿಗೆ ಹಿತವಚನ, ಬುದ್ಧಿವಾದ, ಕಾನೂನು ಸಲಹೆ ಹೇಳುತ್ತಲೇ ಜೀವನ ಸವೆಸಿದವರು. ಇಂತಹ ನಿಂಗೇಗೌಡ್ರು ಮನೆ ಹತ್ತಿರ ಬಂದು ಜಗತಿಕಟ್ಟೆ ಮೇಲೆ ಕುಳಿತ. ನಿಂಗೇಗೌಡ್ರು ಎಂದೂ ಗಮನಿಸದ ಮುಖವೆಲ್ಲ ಸಪ್ಪೆಯಾಗಿದ್ದ ಈ ವ್ಯಕ್ತಿಯನ್ನು ನೋಡಿ ಮಾತಾಡಿಸುತ್ತಿದ್ದ ವ್ಯಕ್ತಿಗೆ, 'ಒಂದು ನಿಮಿಷ ಇರು ಬಂದೆ' ಅಂತ ಆತನಿಗೆ ಹೇಳಿ ಹನುಮಣ್ಣನ ಹತ್ತಿರ ಬಂದಾಗ ಈತ ಕೈ ಮುಗಿದ, ನಿಂಗೇಗೌಡ್ರು 'ಯಾವೂರಪ್ಪ ಏನುಕ್ಕೆ ಬಂದಿದ್ದು?' ಎಂದು ಕೇಳಿದಕ್ಕೆ ಈತ ಪರಿಚಯದೊಂದಿಗೆ ತನ್ನ ಹೆಂಡತಿಗಾದ ಅವಮಾನದ ಕತೆಯನೆಲ್ಲ ಒಂದೂ ಬಿಡದೆ ಬಿಡಿಸಿಟ್ಟು, 'ಆ ನಂಜಪ್ಪನ ಮೇಲೆ ಒಂದು ಕಂಪ್ಲೇಂಟ್ ಕೊಡಿಸಬೇಕಿತ್ತು ಸ್ವಾಮಿ ಬಹಳ ಅವಮಾನ ಮಾಡಿದ್ದಾನೆ' ಎಂದು ದುಃಖದಲ್ಲಿ ಹೇಳಿಕೊಂಡ. ಇವನು ಹೇಳಿದ್ದನ್ನೆಲ್ಲ ಕೇಳಿದ ನಿಂಗೇಗೌಡ್ರು, 'ನೋಡಪ್ಪ ನಂಜಪ್ಪ ನಾ ಕಾಣದ ಮನುಷ್ಯನೇನು ಅಲ್ಲ, ಆ ವ್ಯಕ್ತಿ ಸರಿಯಿಲ್ಲ ಅವನು ಮಾಡಿದ ತೆರೆ ಹಿಂದಿನ ಕರ್ಮಕೆಲಸಗಳು ಬಹಳಷ್ಟು ಇವೆ. ನೀನು ಅವನನ್ನು ಎದುರು ಹಾಕ್ಕೊಂಡು ಒಂದೂರಲ್ಲಿ ಬಾಳೊದು ಕಷ್ಟ, ಇನ್ನು ಅವನ ಸಹವಾಸಕ್ಕೆ ಹೋಗಬ್ಯಾಡ' ಎಂದು ಹೇಳಿ, 'ಅಂಥವರನ್ನು ಹೆದ್ರುಸೋದು ಅವನಷ್ಟೆ ಬಲಿಷ್ಟರಾಗಿರಬೇಕು ಹಾಗೆ ಬೆಳೆಯುವುದಕ್ಕೆ ನಿನಗೆ ಆಗುತ್ತಾ' ಎಂದ ನಿಂಗೇಗೌಡ್ರುಗೆ ಹನುಮಪ್ಪ 'ಹಟ್ಟೀಲಿ ಇರೋ ನಾವು ಏನ್ಮಾಡ್ಬಹುದು ಸ್ವಾಮಿ. ಅದುಕ್ಕೆ ನಿಮ್ಮತ್ರ ಬಂದೆ' ಎಂದ. ನಿಂಗೇಗೌಡ್ರು 'ನೋಡಪ್ಪ ನೀವೆಲ್ಲ ಬಡವರು, ಬಲಿದ್ರ ಮನೆ ಕೆಲಸ ಮಾಡಿ ಹೊಟ್ಟೆಹೊರೆಯೋರು. ನೀವು ಅವರಮಟ್ಟಕ್ಕೆ ಬಂದು ಬದುಕು ಕಟ್ಟಬೇಕು. ಆಗ ನಿಮ್ಮ ತಂಟೆಗೆ ಯಾರು ಬರಲ್ಲ' ಅನ್ನುತ್ತ 'ಜಮೀನು ಇದೆಯಾ?' ಅಂದ್ರು. 'ಹೂ ಸ್ವಾಮಿ ಒಂದ್ ಮೂರೆಕರೆ ಇದೆ' ಎಂದ. ಒಂದ್ಕೆಲಸ ಮಾಡು ಸರ್ಕಾರ ನಿಮಿಗೇಂತಾ 'ಗಂಗಾ ಕಲ್ಯಾಣ' ಅಂತ ಬೋರಿನ ಸೌಲತ್ತು ನೀಡಿದೆ. ಆ ಸೌಲಭ್ಯ ಪಡೆದು ಒಳ್ಳೆ ರೈತನಾಗಿ ಅರ್ಥಿಕವಾಗಿ ಸ್ಥಿತಿವಂತನಾಗು. ಅಮೇಲೆ ಇಂತಹ ಕಾಟಗಳೆಲ್ಲ ದೂರ ಆಗುತ್ತವೆ ಎನ್ನುತ್ತಲೇ 'ಜಮೀನು ಯಾರ ಹೆಸರಲ್ಲಿ ಇದೆ' ಎಂದ್ರು. ಅದುಕ್ಕೆ ಆತ 'ನಮ್ಮ ತಾತನ ಹೆಸರಲ್ಲಿ ಇದೆ ಸ್ವಾಮಿ' ಎಂದ, ಮೊದಲು ಆ ಜಮೀನನ್ನು ನಿನ್ನ ಹೆಸರಿಗೆ ಮಾಡಿಸಿಕೊ